**E-ISSN:** 2583-9667
**Indexed Journal**
**Peer Reviewed Journal**
https://multiresearchjournal.theviews.in

**Received: 08-10-2023**
**Accepted: 17-12-2023**

**INTERNATIONAL JOURNAL OF ADVANCE RESEARCH IN MULTIDISCIPLINARY**

**Volume 2; Issue 1; 2024; Page No. 366-369**

# ಪ್ರಭುತ್ವ ಮತ್ತು ರೈತರ ಆತ್ಮಹತ್ಯೆಗಳು

**ದಾದಾಹಯಾತ್ ಬಾವಾಜಿ**

ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕರ್ನಾಟಕ, ಭಾರತ

**DOI:** https://doi.org/10.5281/zenodo.13747692

**Corresponding Author:** ದಾದಾಹಯಾತ್ ಬಾವಾಜಿ

**Abstract**

ಪ್ರಸ್ತುತ ಸರ್ಕಾರದ ಹೇಳಿಕೆಗಳನ್ನು ಗಮನಿಸುವುದಾದರೆ ರೈತರ ಬಗೆಗೆ ಪ್ರಭುತ್ವದ ಆಚರಣೆಗಳಲ್ಲಿ ದ್ವಂದ್ವ ನೀತಿಗಳನ್ನು ಅರಿತುಕೊಳ್ಳಬಹುದಾಗಿದೆ. ಸರ್ಕಾರ ಜಾರಿಗೆ ಬಂದ ನಂತರ ಕೇವಲ ಒಂದು ವರ್ಷದಲ್ಲಿ ಸ್ವಾಮಿನಾಥನ್ ವರದಿಯನ್ನು ಜಾರಿಗೆ ತರುತ್ತೇವೆ ಎಂದು ಹೇಳುವ ಸರ್ಕಾರವು ನಂತರ ತಮ್ಮ ಅಧಿಕಾರಾವಧಿಯಲ್ಲಿ ಈ ವರದಿಯ ಅನುಷ್ಠಾನದಿಂದ ಮಾರುಕಟ್ಟೆಯು ನಾಶವಾಗುವುದರಿಂದ ಸ್ವಾಮಿನಾಥನ್ ವರದಿಯನ್ನು ಜಾರಿಗೆ ತರುವುದು ಅಸಾಧ್ಯ ಎಂದು ಹೈಕೋರ್ಟ್‌ಗೆ ಅಫಿಡವಿಟ್ ಸಲ್ಲಿಸುತ್ತದೆ ಮತ್ತು ಆರ್.ಟಿ.ಐ.ನಲ್ಲೂ ಇದೇ ಹೇಳಿಕೆಯನ್ನು ನೀಡುತ್ತದೆ. ಮತ್ತೊಬ್ಬ ಕೇಂದ್ರ ಕೃಷಿ ಮಂತ್ರಿ ನಾವು ಇಂತಹ ಭರವಸೆಯನ್ನೇ ನೀಡಿಲ್ಲ ಎಂದು ಹೇಳಿಕೆ ನೀಡುತ್ತಾರೆ. ನಂತರ ಮತ್ತೆ ಕೇಂದ್ರ ಹಣಕಾಸು ಮಂತ್ರಿಗಳು ಬಜೆಟ್ ಮಂಡನೆಯ ಸಂಧರ್ಭದಲ್ಲಿ ನಾವು ಈ ರೀತಿ ಭರವಸೆಯನ್ನು ರೈತರಿಗೆ ನೀಡಿದ್ದೆವು, ಅದರಂತೆ ನಾವು ಈಗಾಗಲೇ ಸ್ವಾಮಿನಾಥನ್ ವರದಿಯನ್ನು ಜಾರಿಗೆ ತಂದು ಭರವಸೆ ಈಡೇರಿಸಿದ್ದೇವೆ ಎಂದು ಸಮರ್ಥಿಸಿಕೊಳ್ಳುತ್ತಾರೆ. ಇಂತಹ ಈ ಹೇಳಿಕೆಗಳು ಪ್ರಭುತ್ವದ ನೈಜತೆ ಮತ್ತು ಬಹುಸಂಖ್ಯಾತ ರೈತ ಸಮುದಾಯದ ಕುರಿತು ಅಸಡ್ಡೆಯನ್ನು ತೋರಿಸುತ್ತದೆ ಎಂದು ಸ್ಪಷ್ಟವಾಗಿ ಗೋಚರಿಸುತ್ತದೆ.

**Keywords:** ಪ್ರಭುತ್ವ, ರೈತ, ಕೃಷಿ, ಆತ್ಮಹತ್ಯೆಗಳು, ಸಾಲಬಾಧೆ, ಸ್ವಾಮಿನಾಥನ್ ವರದಿ

## Introduction

ಪ್ರಭುತ್ವ ಮತ್ತು ರೈತರ ನಡುವಿನ ಸಂಘರ್ಷಗಳು ಅನೇಕ ಶತಮಾನಗಳಿಂದ ಅಂದರೆ ರಾಜಪ್ರಭುತ್ವ, ಬ್ರಿಟಿಷರು ಸೇರಿದಂತೆ ವಸಾಹತುಶಾಹಿ ರಾಷ್ಟ್ರಗಳು ನಡೆಸಿದ ಆಳ್ವಿಕೆಗಳಿಂದ ಇಂದಿನ ಪ್ರಜಾಪ್ರಭುತ್ವ ಸರ್ಕಾರಗಳವರೆಗೂ ಕೂಡ ಮುಂದುವರಿದಿರುವುದು ಕಾಣಬಹುದು. ರಾಜಪ್ರಭುತ್ವದ ಕಾಲದಲ್ಲಿ ಕಂದಾಯದ ರೂಪದಲ್ಲಿ ಅಗಾಧ ಪ್ರಮಾಣದ ತೆರಿಗೆಗಳಿಂದ ರೈತರು ಶೋಷಣೆಗೆ ಒಳಗಾಗುತ್ತಿದ್ದರೆ, ಕೆಲವು ಸಂದರ್ಭದಲ್ಲಿ ರೈತರು ರಾಜರ ವಿರುದ್ಧ ದಂಗೆದ್ದ ಘಟನೆಗಳೂ ಕಾಣುತ್ತೇವೆ ಆದರೂ ಯಾವುದೇ ಕಾನೂನು ಅಥವಾ ಸಂವಿಧಾನಬದ್ಧ ಹಕ್ಕುಗಳಿಲ್ಲದ ಕಾರಣ ರಾಜರ ಅಧಿಕಾರದ ವಿರುದ್ಧ ದಬ್ಬಾಳಿಕೆಗೆ ಒಳಗಾಗಿದ್ದೇ ಹೆಚ್ಚು. ಜೊತೆಗೆ ಆ ಸಂದರ್ಭದಲ್ಲಿ ಕೈಗಾರಿಕೆಗಳು, ಮತ್ತು ಇತರೆ ಸೇವಾ ವಲಯಗಳು ಅಷ್ಟು ಕಂಡುಬಾರದ ಕಾರಣ ಕೃಷಿ ಮಾತ್ರ ರಾಜ್ಯದ ಆದಾಯದ ಮೂಲವಾಗಿರುವ ಕಾರಣ ರೈತರಿಗೆ ನೆರವಾಗುವಂತಹ ತಕ್ಕಮಟ್ಟಿಗಿನ ನೀರಾವರಿಯಂತಹ ರೈತೋಪಯೋಗಿ ಕ್ರಮ ಕಂಡುಬಂದರೂ ಸಹ ಸಂಘರ್ಷಗಳೂ ಸಹ ಕಾಣಸಿಗುತ್ತವೆ. ನಂತರದಲ್ಲಿ ಬಂದ ವಸಾಹತು ನೀತಿ ವಿಶೇಷವಾಗಿ ಭಾರತವನ್ನು ದೀರ್ಘ ವರ್ಷಗಳವರೆಗೆ ಆಳಿದ ಬ್ರಿಟಿಷ್ ನೀತಿಯಿಂದಾಗಿ ದೇಶದ ರೈತ ಸಮುದಾಯವು ಹೆಚ್ಚು ದೌರ್ಜನ್ಯಕ್ಕೊಳಗಾಗಿರುವುದು ಇತಿಹಾಸದ ಮೂಲಕ ಕಂಡುಬರುತ್ತದೆ. ಏಕೆಂದರೆ ಈಸ್ಟ್ ಇಂಡಿಯಾ ಕಂಪೆನಿಯು ಒಂದು ವ್ಯಾಪಾರಿ ಸಂಸ್ಥೆಯಾಗಿದ್ದರಿಂದ ಅದರ ಉದ್ದೇಶ ಲಾಭಗಳಿಕೆ ಮಾತ್ರವಾಗಿತ್ತು. ಈ ವ್ಯಾಪಾರಿ ಉದ್ದೇಶವನ್ನು ಸರಳೀಕರಣಗೊಳಿಸಲು ಭಾರತದ ಆಂತರಿಕ ಪ್ರಭುತ್ವದಲ್ಲಿ ಹಸ್ತಕ್ಷೇಪ ಮಾಡಿ ಅಧಿಕಾರ ಪಡೆದ ಬ್ರಿಟಿಷರು ಕಂದಾಯ ವ್ಯವಸ್ಥೆ, ತೆರಿಗೆಯ ಪ್ರಮಾಣ, ಕೃಷಿ ಜಮೀನಿನ ಮಾಲಿಕತ್ವ ಮತ್ತು ಬೆಳೆ ಪದ್ಧತಿಯಲ್ಲೂ ಹಸ್ತಕ್ಷೇಪ ಮಾಡುವ ಮೂಲಕ ಅನೇಕ ರೀತಿಯಲ್ಲಿ ರೈತರನ್ನು ದೌರ್ಜನ್ಯಕ್ಕೆ ಒಳಪಡಿಸಿರುವುದು ಕಂಡು ಬರುತ್ತದೆ. ಇಲ್ಲಿ ರೈತರನ್ನು ಕೇವಲ ಆದಾಯದ ಮೂಲವನ್ನಾಗಿ ಮಾತ್ರ ನೋಡಲಾಗುತ್ತಿತ್ತು ಎಂಬುದನ್ನು ಅರಿಯಬಹುದಾಗಿದೆ.

ವಿಶೇಷವಾಗಿ ಈಗಿನ ಪ್ರಭುತ್ವಗಳು ಜನಕಲ್ಯಾಣ ಉದ್ದೇಶಗಳನ್ನು ಇಟ್ಟುಕೊಂಡಿರುವುದರಿಂದ ಜನೋಪಯೋಗಿ ಕಾರ್ಯವನ್ನೇ ಮಾಡಬೇಕಾಗಿದೆ. ಆದರೆ ಒಟ್ಟು ಉದ್ಯೋಗದ ನೀಡಿಕೆಯಲ್ಲಿ

ಇಂದಿಗೂ ಶೇಕಡಾ 58% ರಷ್ಟು ಪಾಲನ್ನು ಹೊಂದಿರುವ ರೈತವರ್ಗವು ತಮ್ಮನ್ನು ಆಳುವವರಿಗೆ ಅಸ್ತ್ರಗಳಂತೆ ತೋರುತ್ತಿವೆಯೇ ಹೊರತು ಅವರನ್ನು ಸಬಲರನ್ನಾಗಿಸುವ ಪ್ರಾಮಾಣಿಕ ಪ್ರಯತ್ನ ಕಂಡು ಬರುತ್ತಿಲ್ಲ. ಅದಕ್ಕೆ ಉತ್ತಮ ಉದಾಹರಣೆ ಎಂದರೆ ಮಹಾರಾಷ್ಟ್ರ ಮತ್ತು ದೆಹಲಿಯಲ್ಲಿ ನಡೆದ ರೈತ ಹೋರಾಟಕ್ಕೆ ಜನಪ್ರತಿನಿಧಿಗಳು ನೀಡಿದ ಪ್ರತಿಕ್ರಿಯೆಗಳು. ಆದರೆ ಇದು ಕೇವಲ ಪಾದಯಾತ್ರೆ, ಹೋರಾಟ ಅಥವಾ ಚಳುವಳಿ ಆಗಿರಲಿಲ್ಲ. ಬರಿಗಾಲುಗಳಲ್ಲಿ ಸುಮಾರು ನೂರೈವತ್ತಕ್ಕೂ ಹೆಚ್ಚು ಕಿಲೋಮೀಟರ್ ಸಾಗಿದ ರೈತರ ಚರ್ಮ ಹರಿದ ಪಾದಗಳು ರೈತರ ಅಂತರಂಗದ ನೋವು, ಅಸಹಾಯಕತೆಗಳ ಪ್ರತಿರೂಪದಂತಿತ್ತು.

ರೈತರ ಅಭಿವೃದ್ಧಿಯ ಹೆಸರಿನಲ್ಲಿ ಭಾವೋದ್ರೇಕ ಮಾತುಗಳು, ಘೋಷಣೆಗಳ ಮೂಲಕ ಆಳ್ವಿಕೆಗೆ ಬಂದ ಸರ್ಕಾರಗಳು ರೈತರನ್ನು ಚಳುವಳಿಯ ಕುರಿತು ಇವರು ರೈತರಲ್ಲ ಎಂಬ ಉಡಾಫೆಯ ಮಾತುಗಳೋ ಅಥವಾ ಇನ್ನೂ ಮುಂದುವರೆದು ಇವರು ನಕ್ಸಲರು ಎಂದು ಕರೆದ ಸಂಗತಿ ಕಂಡುಬರುತ್ತದೆ. ಪ್ರತಿಕ್ರಿಯೆಗಳು ನಮ್ಮನ್ನಾಳುವ ಪ್ರಭುತ್ವವು ಅಧಿಕಾರದ ಸ್ಥಿತಿಯಲ್ಲಿ ಯಾವ ರೀತಿ ನಡೆದುಕೊಳ್ಳುತ್ತದೆ ಎಂಬುದಕ್ಕೆ ಈ ಪ್ರಭುತ್ವದ ಪ್ರತಿಕ್ರಿಯೆಗಳು ಬಹುಮುಖ್ಯ ನಿದರ್ಶನವಾಗಿವೆ. ಇನ್ನು ಕೆಲವು ಸರ್ಕಾರಗಳು ಕೈಗೊಂಡ ಸಾಲಮನ್ನಾದಂತಹ ಕಾರ್ಯಕ್ರಮಗಳು ಪ್ರಚಾರದ ಭರದಲ್ಲಿ ರಾಜಕೀಯ ದಾಳವಾಗಿ ಬಳಸಿಗೊಂಡು ಸಾಲಮನ್ನಾ ಒಂದೇ ರೈತರ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಎಂಬಂತೆ ಸರ್ಕಾರಗಳು ಪ್ರತಿಕ್ರಿಯಿಸುತ್ತಿರುವುದು ಉಳಿದ ಅನೇಕ ಸಮಸ್ಯೆಗಳಿಂದ ದಿಕ್ಕು ತಪ್ಪಿಸುವ ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತಾರೆ.

ಏಕೆಂದರೆ ಸಾಲಮನ್ನಾ ವಿಷಯವು ಆರ್ಥಿಕ ಋಣಭಾರದ ಸಮಸ್ಯೆಗೆ ಬಿದ್ದ ರೈತರನ್ನು ಉಸಿರಾಡುವಂತೆ ಮಾಡುವ ತಾತ್ಕಾಲಿಕ ಚಿಕಿತ್ಸೆಯೇ ಹೊರತು ಅಂತಿಮ ಪರಿಹಾರವಲ್ಲ. ಮುಖ್ಯವಾಗಿ ಸರ್ಕಾರವು ರೈತರನ್ನು ಇತರ ಕೈಗಾರಿಕೋದ್ಯಮಿಗಳು ಧೈರ್ಯವಾಗಿ ಬದುಕುವಂತೆ ಭವಿಷ್ಯತ್ತಿನ ಕುರಿತು ನಿಖರತೆ, ಆಶಾಭಾವ, ಅವರ ಕೆಲಸದ ಪ್ರತಿಫಲದ ಕುರಿತು ನಂಬಿಕೆ, ಆತ್ಮವಿಶ್ವಾಸವನ್ನು ಮೂಡಿಸಬೇಕಿದೆ. ಇದು ಸರ್ಕಾರಗಳ ನೈಜ ಉದ್ದೇಶವಾಗಬೇಕಿದೆ. ಅದಕ್ಕಾಗಿ ಅತಿಮುಖ್ಯವಾಗಿ ಕೈಗೊಳ್ಳಬೇಕಾದ ಕ್ರಮ ಏನೆಂದರೆ ಎಂ.ಎಸ್.ಸ್ವಾಮಿನಾಥನ್ ವರದಿಯನ್ನು ಯಥಾವತ್ ಅನುಷ್ಠಾನಗೊಳಿಸುವುದು. ಇಲ್ಲಿ ಸ್ವಾಮಿನಾಥನ್ ವರದಿಯನ್ನು 'ಯಥಾವತ್' ಎಂದು ಒತ್ತು ಕೊಟ್ಟು ಹೇಳಿಕೊಳ್ಳಲು ಕಾರಣ ನಮ್ಮನ್ನಾಳುವ ಪ್ರಭುತ್ವವು ಈ ವರದಿಯನ್ನು ವಿವಿಧ ರೀತಿಯಲ್ಲಿ ತೋರಿಸುತ್ತಿರುವ ರೀತಿ.

ಎಂ.ಎಸ್.ಸ್ವಾಮಿನಾಥನ್ ವರದಿಯ ಅನುಷ್ಠಾನವನ್ನು ತನ್ನ ಪ್ರಣಾಳಿಕೆಯ ಪ್ರಮುಖ ಅಂಶವಾಗಿ ಇಟ್ಟುಕೊಂಡಿದಂತಹ ಸರ್ಕಾರವು ವಿವಿಧ ರೀತಿಯಲ್ಲಿ ವರದಿಯನ್ನು ತಿದ್ದುವ ಕೆಲಸವನ್ನು ಮಾಡುತ್ತಿದೆ. ಎಂ.ಎಸ್.ಸ್ವಾಮಿನಾಥನ್ ವರದಿಯು ಮುಖ್ಯವಾಗಿ ಸರ್ಕಾರಗಳಿಗೆ ಮಾಡುವ ಒತ್ತಾಯ ಏನೆಂದರೆ, ರೈತರು ಬೆಳೆದ ವಿವಿಧ ಬೆಳೆಗಳಿಗೆ ಸರ್ಕಾರವು ಬೆಂಬಲ ಬೆಲೆಯನ್ನು ಘೋಷಿಸಬೇಕು ಎಂಬುದಾಗಿದೆ. ಹಾಗೆಯೇ ಸರ್ಕಾರ ಬೆಂಬಲ ಬೆಲೆಯನ್ನು ಹೇಗೆ, ಯಾವ ಆಧಾರದ ಮೇಲೆ ನಿಗದಿ ಪಡಿಸಬೇಕು ಎಂಬುದೂ ಈ ವರದಿಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಅದರ ಪ್ರಕಾರ ಗೋಧಿಗೆ ಬೆಂಬಲ ಬೆಲೆ ಘೋಷಿಸಬೇಕೆಂದರೆ ಒಟ್ಟು ಕೈಗೊಳ್ಳಲಾದ ವೆಚ್ಚಕ್ಕೆ ಶೇಕಡಾ 50% ರಷ್ಟನ್ನು ಸೇರಿಸಿ, ಅದನ್ನು ಬೆಂಬಲ ಬೆಲೆ ಎಂದು ಘೋಷಿಸಬೇಕು. ರೈತ ಕೈಗೊಳ್ಳಲಾದ ಆ ವೆಚ್ಚವು ಪ್ರಮುಖವಾಗಿ ಮೂರು ರೀತಿಯಾಗಿ ಕೈಗೊಂಡ ವೆಚ್ಚವಾಗಿರುತ್ತದೆ. ಮೊದಲನೇಯದಾಗಿ ಬೀಜ, ರಸಗೊಬ್ಬರ ಇತರೆ ಮೇಲೆ ಮಾಡಿದ ವೆಚ್ಚ, ಎರಡನೇಯದಾಗಿ ಉತ್ಪಾದನೆಯಲ್ಲಿ ತೊಡಗಿಸಕೊಂಡ ಮನೆಯ ಎಲ್ಲಾ ಸದಸ್ಯರ ಕೂಲಿಯ ಮೊತ್ತ ಮತ್ತು ಮೂರನೇಯದಾಗಿ ಉತ್ಪಾದನಾ ಜಮೀನಿನ ಬಾಡಿಗೆ ಮೊತ್ತ. ಈ ಮೂರು ಅಂಗಗಳು ಸೇರಿ ಬೆಂಬಲ ಬೆಲೆಯನ್ನು ಸರ್ಕಾರ ನಿಗದಿಗೊಳಿಸಬೇಕೆಂದು ಸ್ವಾಮಿನಾಥನ್ ವರದಿಯ ಒತ್ತಾಯ. ಆದರೆ ಸರ್ಕಾರವು ಕೇವಲ ಕೆಲವು ವೆಚ್ಚಗಳನ್ನು ಪರಿಗಣಿಸಿ ಅದಕ್ಕೆ ಒಂದಿಷ್ಟನ್ನು ಸೇರಿಸಿ ಅದೇ ಎಂ.ಎಸ್.ಸ್ವಾಮಿನಾಥನ್ ನೀಡಿದ ವರದಿಯ ಶಿಫಾರಸ್ಸಿನ ಬೆಂಬಲ ಬೆಲೆ ಎಂದು ಘೋಷಿಸಿಕೊಳ್ಳುತ್ತಿದೆ. ಇಷ್ಟಾದರೂ ರೈತರಿಗೆ ಬೆಂಬಲ ಬೆಲೆಯೂ ಕೈ ಸೇರುತ್ತಿಲ್ಲ ಎಂದು ಅಳಲು ತೋರಿಕೊಳ್ಳುವುದು ಸಾಮಾನ್ಯವಾಗಿದೆ.

ಕೇವಲ ಸ್ವಾಮಿನಾಥನ್ ವರದಿಯನ್ನು ಜಾರಿಗೆ ತರುವಲ್ಲಿ ಮಾತ್ರವಲ್ಲದೇ ರೈತರಿಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ನೀಡುವುದರಲ್ಲಿಯೂ ಇದುವರೆಗಿನ ಬಹುತೇಕ ಸರ್ಕಾರಗಳು ವಿಫಲವಾಗಿವೆ. ವಿದೇಶಗಳಿಗೆ ಹೋಲಿಸಿದರೆ ಭಾರತದ ರೈತವರ್ಗವು ನೀರಾವರಿ ಸೌಲಭ್ಯ, ಸಕಾಲಿಕ ಬೀಜ–ಗೊಬ್ಬರದ ವಿತರಣೆ, ಸಾಲಸೌಲಭ್ಯ, ದಲ್ಲಾಳಿಗಳ ತೀವ್ರ ಹಸ್ತಕ್ಷೇಪ, ಮಾರುಕಟ್ಟೆ ಸಮಸ್ಯೆ, ಆಧುನಿಕ ಬೇಸಾಯದ ತಿಳುವಳಿಕೆಯ ಸಮಸ್ಯೆ, ಸಂಗ್ರಹಣೆ (ಗೋದಾಮುಗಳ) ಕೊರತೆ, ಮುಂತಾದ ಸಮಸ್ಯೆಗಳು ತೀವ್ರವಾಗಿರುವುದನ್ನು ಕಾಣಬಹುದು. ನೀರಾವರಿಗೆ ಸಂಬಂಧಿಸಿದಂತೆ ಸ್ವಾತಂತ್ರ್ಯದ ಪೂರ್ವದಲ್ಲಿ ರಾಜರುಗಳ ಕಾಲಾವಧಿಯಲ್ಲಿ ನಿರ್ಮಾಣವಾಗಿದ್ದ ಅನೇಕ ಕೆರೆಗಳು ಕೃಷಿಯ ಮೂಲವಾಗಿದ್ದವು. ಆದರೆ ಇಂದು ಅವುಗಳ ಮೇಲೆ ನಿರ್ಮಾಣವಾದ ಅನೇಕ ಕಟ್ಟಡಗಳು ತಲೆ ಎತ್ತಿ ಬೆಂಗಳೂರಿನಂತಹ ನಗರಗಳೇ ಮೂಕ ಸಾಕ್ಷಿಯಾಗಿ ನಿಂತಿವೆ. ಕೆಲವು ಕಡೆ ಬೃಹತ್ ನೀರಾವರಿ ಯೋಜನೆಗಳು ನಿರ್ಮಾಣವಾಗಿವೆ ಆದರೂ ತುಂಗಭದ್ರಾ ಜಲಾಶಯದಂತಹ ಬೃಹತ್ ನೀರಾವರಿ ಪ್ರದೇಶಗಳು ಸೂಕ್ತ ನಿರ್ವಹಣೆ ಇಲ್ಲದೇ ಹತ್ತಾರು ಅಡಿಗಳಷ್ಟು ಹೂಳು ತುಂಬಿಕೊಂಡು ರೈತರಿಗೆ ವಾರ್ಷಿಕ ಎರಡು ಬೆಳೆಗಳನ್ನು ಬೆಳೆಯಲು ಅವಕಾಶ ಇಲ್ಲದಂತಾಗಿದೆ. ಇಲ್ಲಿ ನದಿ ದಂಡೆಯ ಜನರೇ ಕೇವಲ ಕುಡಿಯುವ ನೀರಿಗೆ ಪರದಾಡುವಂತಾಗಿದೆ. ಸೂಕ್ತ ಮಾನದಂಡಗಳಿಲ್ಲದೇ ಕಾವೇರಿ ನದಿಯ ಕನ್ನಂಬಾಡಿಯ ಮಳೆನೀರಿನ ಸಂಪೂರ್ಣ ಬಳಕೆ ಸಾಧ್ಯವಾಗದೇ ನೀರು ಸಮುದ್ರ ಸೇರುವುದರೊಂದಿಗೆ, ಬೇಸಿಗೆ ದಿನಗಳಲ್ಲಿ ನೆರೆ ರಾಜ್ಯಗಳೊಂದಿಗೆ ಕಾದಾಡುವ ಸ್ಥಿತಿ ಪ್ರತಿ ಬಾರಿ ನಿರ್ಮಾಣವಾಗುತ್ತಿದೆ. ಸಿಂಗಟಾಲೂರು ಏತ ನೀರಾವರಿ ನಿರ್ಮಾಣವಾದರೂ ನೀರು ಹರಿಸುವ ಕಾಲುವೆಗಳ ಒಡೆದಿರುವಿಕೆ, ಕಾಲುವೆಗಳಿಗೆ ಬೃಹತ್ ಪಂಪ್‌ಸೆಟ್ಟುಗಳ ಬಳಕೆ, ಮುಂದೆ ಹರಿಯುವ ನೀರಿನ ತಡೆಹಿಡಿಯುವಿಕೆ ಮುಂತಾದ ಅಕ್ರಮಗಳ ತಡೆಗೆ ಅಧಿಕಾರಿ ವರ್ಗ ವಿಫಲವಾಗಿರುವುದು ಯೋಜನೆಗಳು ಇದ್ದರೂ ಅವಕಾಶಗಳಿಂದ ವಂಚಿತರಾಗಿರುವುದು ಸಹಜವಾಗಿ ಕಾಣಸಿಗುತ್ತದೆ. ಇದು ಸಮಗ್ರ ರೈತ ಅಭಿವೃದ್ಧಿಗೆ ಕಡಿವಾಣ ಬಿದ್ದಂತಾಗಿದೆ.

ರೈತರ ಆತ್ಮಹತ್ಯೆಗಳು ಇಂದು ದೇಶದ ದುಡಿವ ವರ್ಗವನ್ನು

ತಲ್ಲಣಗೊಳಿಸಿದೆ. ದೇಶದ ವಿವಿಧ ಪ್ರದೇಶಕ್ಕನುಗುಣವಾಗಿ ಬೆಳೆಗಳ ಸ್ವರೂಪ, ವಾತಾವರಣ, ಮಣ್ಣಿನ ಗುಣ, ಮಾರುಕಟ್ಟೆ, ಜನರನ್ನಾಳುವ ಪ್ರಭುತ್ವಗಳಲ್ಲಿ ಭಿನ್ನತೆಗಳಿದ್ದರೂ ಕೂಡ ರೈತರ ಆತ್ಮಗತ್ಯೆಗೆ ಮೂಲ ಕಾರಣ ಆರ್ಥಿಕ ಋಣಭಾರವೇ ಆಗಿರುವುದನ್ನು ಕಾಣಬಹುದು. ಆದರೆ ಈ ಆರ್ಥಿಕ ಋಣಭಾರಕ್ಕೆ ದೂಡುವ ಅಂಶಗಳು ವಿವಿಧ ಸ್ವರೂಪದಲ್ಲಿರುವುದನ್ನು ಈ ಕೆಳಗಿನಂತೆ ವಿವರಿಸಲಾಗಿದೆ. ಅದರಂತೆ ಅಧ್ಯಯನ ಪ್ರದೇಶದಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರು ಬದುಕುತ್ತಿದ್ದ ರೈತರ ಸ್ಥಿತಿಗತಿಗಳು, ಅವರಿಗೆ ಲಭಿಸುತ್ತಿದ್ದ ಸಾಲದ ಅವಕಾಶ, ಅದರ ನಂತರ ಅವರು ಅನುಭವಿಸುತ್ತಿದ್ದ ಒತ್ತಡಗಳು ಇತ್ಯಾದಿಗಳನ್ನು ಅಧ್ಯಯನದಲ್ಲಿ ಚರ್ಚಿಸುವ ಜರೂರತ್ತನ್ನು ಅಧ್ಯಯನ ಒದಗಿಸುತ್ತದೆ. ಪ್ರಸ್ತುತ ಆಧುನಿಕ ಕಾಲದ ಜಾಗತೀಕರಣದ ಸಂದರ್ಭದಲ್ಲಿ ರೈತನ ಆಗುಹೋಗುಗಳು ಧ್ವನಿ ಕಳೆದುಕೊಂಡಿವೆ. ಸ್ವಾರ್ಥಕ್ಕೆ ಮುಂದಾದ ಮಾಧ್ಯಮ, ಖಾಸಗೀಕರಣಗೊಂಡ ಕಂಪೆನಿಗಳು, ಲೇವಾದೇರಿಗಾರರು ದಿನೇ–ದಿನೇ ರೈತನನ್ನು ಆತ್ಮಹತ್ಯೆಗೆ ದೂಡಲ್ಪಡುತ್ತಿರುವ ಅಂಶಗಳನ್ನು ಅಧ್ಯಯನ ಪ್ರದೇಶದದ ವ್ಯಾಪ್ತಿಯಲ್ಲಿ ಕಾಣಸಿಗುತ್ತವೆ.

ಹೂವಿನಹಡಗಲಿ ತಾಲೂಕಿನ ಹಿರೇಹಡಗಲಿಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ 44 ವರ್ಷ ವಯಸ್ಸಿನ ಗೋಣೆಪ್ಪ ಎಂಬ ರೈತನಿಗೆ ಇಬ್ಬರು ಹೆಣ್ಣು ಮತ್ತು ಒಬ್ಬ ಗಂಡು ಮಗನಿದ್ದಾನೆ. ಗೋಣೆಪ್ಪ ಎಂಬ ಈ ರೈತ ತನ್ನ ಪೂರ್ವಜರ 3 ಎಕರೆ ಜಮೀನಿನಲ್ಲಿ ತೊಗರಿ, ಮೆಕ್ಕಜೋಳ, ಬಿಳಿಜೋಳವನ್ನು ಮಾತ್ರ ಬೆಳೆಯುತ್ತಿದ್ದ. ಆದರೆ ನಾಲ್ಕು ವರ್ಷಗಳ ಹಿಂದೆ ಪಕ್ಕದ ಏಳು ಎಕರೆ ನೀರಾವರಿ ಹೊಲವನ್ನು ಗುತ್ತಿಗೆ ಪಡೆದು ಆರಂಭದಲ್ಲಿ ಮೆಕ್ಕೆಜೋಳ ಬೆಳೆದು ತಕ್ಕ ಮಟ್ಟಿಗೆ ಆದಾಯ ಪಡೆದಿದ್ದರು. ಆದರೆ ನೀರಾವರಿ ಭೂಮಿಯ ಗರಿಷ್ಠ ಬಳಕೆಗೆ ಎಂಬಂತೆ ಅತಿ ಹೆಚ್ಚು ನೀರು ಬಯಸುವ, ವಾಣೀಜ್ಯ ಬೆಳೆಯಾದ ಕಬ್ಬು ಬೆಳೆಯಲಾರಂಭಿಸಿದರು ಎಂದು ಆತ್ಮಹತ್ಯೆ ಮಾಡಿಕೊಂಡ ಗೋಣೆಪ್ಪ ಅವರ ಪತ್ನಿ ಹೇಳುತ್ತಾರೆ. ತಾಂತ್ರಿಕ ಕಾರಣಗಳಿಂದ ಸಹಕಾರ ಸಂಘ ಮತ್ತು ಇತರೆ ಸಾಂಸ್ಥಿಕ ಮೂಲಗಳಲ್ಲಿ ಸಾಲಕ್ಕಾಗಿ ಪ್ರಯತ್ನಿಸಿದರೂ ಸಾಲ ಸಿಗಲಿಲ್ಲ. ಆದರೆ ಅತಿಯಾದ ವಿಶ್ವಾಸದಲ್ಲಿದ್ದ ಗೋಣೆಪ್ಪ ಪ್ರಯತ್ನ ಬಿಡದೆ ತನ್ನ ಸ್ನೇಹಿತರ ಸಹಾಯದಿಂದ ತಿಂಗಳ ಬಡ್ಡಿದರದಲ್ಲಿ ಸಾಲ ಪಡೆಯಲಾರಂಭಿಸಿದರು. ಆದರೆ ಕಬ್ಬಿನ ಬೆಳೆಗೆ ಆದ ಖರ್ಚು, ಲಾಭವಾಗಿ ಬರಲಿಲ್ಲ. ಕಬ್ಬಿನ ಬೆಳೆಗೆ ನೀರು ಹಾಯಿಸಲು ಹಗಲು–ರಾತ್ರಿ ಎಂದರೆ ಹೋಗುತ್ತಿದ್ದರು, ಶ್ರಮ ಪಡ್ತಾ ಇದ್ದರು. ಆದರೆ ಆತ್ಮಹತ್ಯೆಯ ನಿರ್ಧಾರ ಕೈಗೊಂಡರು ಈಗ ಎಂದು ಅಳಲು ತೋಡಿಕೊಂಡರು. ಇನ್ನು ದುರಂತದ ವಿಷಯ ಅಂದರೆ ಈ ಕುಟುಂಬ ರೈತರ ಆತ್ಮಹತ್ಯೆಗೆ ಸರ್ಕಾರದಿಂದ ಕೊಡುವ ಪರಿಹಾರ ದೊರಕದೆ ಇರುವುದು. ಏಕೆಂದರೆ ಪ್ರಸ್ತುತ ಆತ್ಮಹತ್ಯೆ ಮಾಡಿಕೊಂಡ ರೈತನ ಜಮೀನು ಅವರ ಹೆಸರಿನಲ್ಲಿಯೂ ಅಥವಾ ಕುಟುಂಬದ ಯಾವುದೇ ಸದಸ್ಯರ ಹೆಸರಿನಲ್ಲಿರದೆ ಅವರ ತಾತಾನ ತಮ್ಮನ ಹೆಸರಿನಲ್ಲಿದ್ದು ಅಲ್ಲಿನ ಒಟ್ಟು ಜಮೀನಿಗೆ ಈ ವ್ಯಕ್ತಿಯ ಸಹೋದರರಷ್ಟೇ ಅಲ್ಲದೆ ಚಿಕ್ಕಪ್ಪ ದೊಡ್ಡಪ್ಪನ ಹೆಸರಿಗೂ ಪಾಲು ದೊರಕಬೇಕಾಗಿದ್ದು ವಿವಾದದಿಂದ ಕೂಡಿದ್ದಾಗಿದೆ. ಪ್ರಸ್ತುತ ಜಮೀನಿಗೆ ತಾವು ಹಕ್ಕುದಾರರು ಎಂಬುದನ್ನು ಸಾಬೀತುಪಡಿಸಲು ವಿಫಲವಾದ ಈ ಕುಟುಂಬವು ಪರಿಹಾರ ಪಡೆಯಲು ಸಾಧ್ಯವಾಗಲಿಲ್ಲ. ಇದರಿಂದ ಈ ಕುಟುಂಬವು ರೈತರ ಆತ್ಮಹತ್ಯೆಗಾಗಿ ನೀಡಲ್ಪಡುವ ಎಲ್ಲಾ ಬಗೆಯ ಪರಿಹಾರ ಪಡೆಯುವುದರಿಂದ ದೂರ ಉಳಿಯಬೇಕಾಯಿತು.

ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನವರಾದ 46 ವರ್ಷ ವಯಸ್ಸಿನ ರೈತ ನಿಂಗಜ್ಜ ಹುಚ್ಚೆಣ್ಣನವರ ಬೇರೆಯವರ ಜಮೀನಿನಲ್ಲಿ ಸತತ ಹತ್ತಾರು ವರ್ಷಗಳಿಂದ ಆಳಾಗಿ ದುಡಿಯುತ್ತಿದರು. ಮಾತ್ರವಲ್ಲದೆ ಬೇರೆ ಮಾಲೀಕರ ಜಮೀನಿನಲ್ಲಿಯೂ ಕೂಲಿ ಮಾಡುತ್ತಿದ್ದರು. ವಯಸ್ಸು ಮತ್ತು ಕಡಿಮೆ ಲಾಭದ ಕಾರಣದಿಂದ ಜಮೀನಿನ ಮಾಲಿಕರು ಆ ಜಮೀನಿನನಲ್ಲಿ ಕೃಷಿ ಮಾಡುವುದರಿಂದ ಹಿಂದೆ ಸರಿದರು. ಸದರಿ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಲು ಮುಂದಾದ ನಿಂಗಜ್ಜ ಮಾಲೀಕರಿಂದ ಮೌಖಿಕ ಒಪ್ಪಂದದ ಮೂಲಕ 6 ಎಕರೆಯ ಅದೇ ಜಮೀನನ್ನು ಗುತ್ತಿಗೆಗೆ ಪಡೆದರು. ಮಾತ್ರವಲ್ಲದೆ ಅದುವರೆಗಿನ ಮಾಲೀಕತ್ವದಲ್ಲಿ ಭತ್ತ ಮತ್ತು ಕಬ್ಬು ಬೆಳೆಗಳನ್ನು ಬೆಳೆಯಲು ದುಡಿಯುತ್ತಿದ್ದ ಈ ವ್ಯಕ್ತಿ ಮಾರುಕಟ್ಟೆಯಲ್ಲಿ ಮೆಣಸಿನಕಾಯಿಗೆ ಅಧಿಕ ಬೇಡಿಕೆ ಮತ್ತು ಕೆಲವು ಇತರ ರೈತರು ಯಶಸ್ಸಿನಿಂದ ಪ್ರಭಾವಿತರಾದ ಇವರು ಗುತ್ತಿಗೆ ಜಮೀನಿನಲ್ಲಿ ಮೆಣಸಿನಕಾಯಿ ಬೆಳೆಯಲು ಮುಂದಾದರು. ಇದಕ್ಕಾಗಿ ಅಪಾರವಾದ ವೆಚ್ಚ ಕೈಗೊಂಡರು. ಮೆಣಸಿನಕಾಯಿ ಗಿಡಗಳಲ್ಲಿ ಸ್ವಲ್ಪ ಏರುಪೇರು ಕಂಡು ಬಂದರೂ ಇದಕ್ಕಾಗಿ ರಾಸಾಯನಿಕವನ್ನು ತಡಮಾಡದೆ ಹಾಕುತ್ತಿದ್ದರು ಎಂದು ಅವರ ಪತ್ನಿ ಹೇಳುತ್ತಾರೆ. ಇದಕ್ಕಾಗಿ ಯಾರಾದರೂ ಕೃಷಿ ತಜ್ಞರನ್ನು ಸಂಪರ್ಕಿಸಿ ಸಲಹೆ ಪಡೆದುಕೊಳ್ಳುತ್ತಿದ್ದರೇ ಎಂದು ಕೇಳಿದರೆ ಬೇರೆಯವರು ಹಾಕಿದ್ರಲ್ರೀ ಅವರೇ ಹೇಳ್ತಿದ್ರೂ ಎಂದರು. ಇದಕ್ಕಾಗಿ ಸಾಕಷ್ಟು ಸಾಲ ಮಾಡಿದ್ದರು. ಹಲವು ಬಾರಿ ತವರಿಂದ ಸಾಲ ತರುವಂತೆ ಒತ್ತಾಯ ಮಾಡುತ್ತಿದ್ದರು. ಅದರಂತೆ ತಾನು ತನ್ನ ತಮ್ಮನ ಬಳಿಯಿಂದ ಐವತ್ತು ಸಾವಿರ ಸಹಾಯ ಪಡೆದಿರುವುದಾಗಿ ಮೃತ ರೈತನ ಪತ್ನಿ ವಿವರಿಸಿದರು. ಈಗ ತುಂಬಾ ಜನ ಸಾಲ ತೀರಿಸಿ ಅಂತ ಮನೆ ಹತ್ರ ಬರ್ತಾ ಇದಾರೆ ಏನು ಮಾಡೋಣ ಎಂದರು. ಮೂಲವಾಗಿ ಈ ಕುಟುಂಬಕ್ಕೆ ಕೃಷಿ ಭೂಮಿಯೇ ಇಲ್ಲದಿರುವುದರಿಂದ ಸರ್ಕಾರದ ಯಾವ ಪರಿಹಾರದ ಹಣವೂ ಇವರಿಗೆ ಸಿಗದು. ಗುತ್ತಿಗೆ ಕೃಷಿ ಮಾಡಿದ್ದು ನಿಜವಾದರೂ ಅದು ಲಿಖಿತ ದಾಖಲೆಯಲ್ಲಿರದೆ ಕೇವಲ ಮೌಖಿಕವಾಗಿ ಗುತ್ತಿಗೆ ಪಡೆದಿದ್ದರಿಂದ ಯಾವರೀತಿಯಿಂದದಲೂ ಸರ್ಕಾರದಿಂದ ಪರಿಹಾರ ಪಡೆಯುವುದಿರಲಿ ಮಾನದಂಡಗಳ ಪ್ರಕಾರ ಇವರನ್ನು ಅಧಿಕೃತವಾಗಿ ರೈತರೆಂದು ಪರಿಗಣಿಸಲೂ ಆಗುವುದಿಲ್ಲ. ಇವರದ್ದು ಅವಿಭಕ್ತ ಕುಟುಂಬ ಆಗಿರುವುದರಿಂದ ಹೊಟ್ಟೆಪಾಡು, ವಸತಿಗೆ ಗಂಡನ ಮನೆಯವರ ಪರಸ್ಪರ ಸಹಾಯ ಸಿಗುತ್ತಿದೆ. ಅದು ಎಷ್ಟು ದಿನಗಳವರೆಗೆ ನಡೆಯುತ್ತೊ ಎಂದು ಆತಂಕಿತರಾದರು. ಇವರ ಇಬ್ಬರು ಹೆಣ್ಣು ಮಕ್ಕಳಲ್ಲಿ ಒಬ್ಬರು ಮನೆಯಲ್ಲಿದ್ದು ಮನೆಯ ಕೆಲಸ ನೋಡಿಕೊಂಡರೆ ಮತ್ತೊಬ್ಬ ಮಗಳು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಓದುತ್ತಿದ್ದಾಳೆ ಎಂದರು.

ಈ ಮೇಲಿನ ಪ್ರಕರಣಗಳು ಆತ್ಮಹತ್ಯೆ ಮಾಡಿಕೊಂಡ ಭೂರಹಿತ ಕೃಷಿ ಕಾರ್ಮಿಕರದ್ದಾಗಿದ್ದರೆ ಕೃಷಿ ಭೂಮಿ ಹೊಂದಿದ್ದರೂ ಬಿಕ್ಕಟ್ಟು ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡ ರೈತರ ಆತಂಕಗಳನ್ನು ಇಲ್ಲಿ ಕಾಣಬಹುದಾಗಿದೆ. ಯಲಬುರ್ಗಾದ ಅರವತ್ತು ವರ್ಷ ವಯಸ್ಸಿನ ಯಮನೂರಪ್ಪ ಹುವಿಲಗೋಳ ಎಂಬ ರೈತ ಕೃಷಿ ಭೂಮಿ ಹೊಂದಿದವನಾದರೂ ಸತತವಾಗಿ ಬೆಳೆ ಕೊರತೆ ಮತ್ತು ಬೆಳೆದ ಬೆಳೆಗೆ ಮಾರುಕಟ್ಟೆಯಲ್ಲಿ ಬೆಲೆ ಸಿಗದೆ ಸಾಲಬಾಧೆಯಿಂದ ವಿಷ

ಕುಡಿದು ಆತ್ಮಹತ್ಯೆ ಮಾಡಿಕೊಂಡಿರುವುದು ಕಂಡು ಬರುತ್ತದೆ. ಪ್ರಸ್ತುತ ಇವರಿಗೆ ಮೂವರು ಮಕ್ಕಳಿದ್ದು ಒಬ್ಬರಿಗೆ ಮದುವೆಯಾಗಿ ಸಂಸಾರಸ್ಥರಾಗಿದ್ದರೆ ಮತ್ತೊಬ್ಬ ಮಗಳಿಗೆ ಮದುವೆಯಾಗಬೇಕಿದೆ. ಮಗ ಸಣ್ಣ ವಯಸ್ಸಿನವನಾಗಿದ್ದು ಇನ್ನು ಪ್ರೌಢಶಾಲೆಯಲ್ಲಿ ಓದುತಿದ್ದಾನೆ. ಬಂದಿರುವ ಹಣ ಮಕ್ಕಳ ಭವಿಷ್ಯಕ್ಕೆ ಕೂಡಿಡುವುದೋ ಇಲ್ಲವೇ ಕೈಸಾಲ, ದಿನ ಖರ್ಚಿಗೆ ಬಳಸುವುದೋ ಎಂದು ಗೊಂದಲ ಮತ್ತು ಆತಂಕದಲ್ಲಿ ನಿರತರಾಗಿದ್ದಾರೆ. ಕೊಟ್ಟಿರುವ ಪರಿಹಾರ ಎಷ್ಟು ದಿನಗಳವರೆಗೆ ಬರುತ್ತದೆ, ದಿನಗೂಲಿಗೆ ಹೋಗಿ ಜೀವನ ನಡೆಸಬೇಕಿದೆ ಎಂದು ನೋವು ಹೇಳಿಕೊಳ್ಳುತ್ತಾರೆ. ಭೂಮಿ ಹೊಂದಿದ್ದು ಆತ್ಮಹತ್ಯೆ ಮಾಡಿಕೊಂಡ ರೈತರಲ್ಲಿ ಲಚಮಪ್ಪ ರಾಠೋಡ ಎಂಬ ಮೂವತ್ತು ವರ್ಷ ಯುವ ರೈತನೂ ಸೇರಿದ್ದು ಇನ್ನು ಸಣ್ಣ ವಯಸ್ಸಿಗೆ ನೀಲಮ್ಮ ಹೆಸರಿನ ಅವನ ಪತ್ನಿ ವಿಧವೆಯಾಗಬೇಕಾಯಿತು. ಒಂಬತ್ತು, ಎಂಟು ಮತ್ತು ಐದು ವರ್ಷ ಪ್ರಾಯದ ಮೂವರು ಮಕ್ಕಳನ್ನು ಹೊಂದಿರುವ ಈ ಯುವ ಮಹಿಳೆ ಭವಿಷ್ಯದಲ್ಲಿ ಸವಾಲಿನ ಬದುಕು ಸವೆಯಬೇಕಿದೆ ಮಗ ಆತ್ಮಹತ್ಯೆಯ ನಿರ್ಧಾರಕ್ಕೆ ಕೈ ಹಾಕಬಾರದಾಗಿತ್ತು ಎಂದು ಕಣ್ಣೀರಿಡುತ್ತಾರೆ.

## References


1. ದಿವಾಕರ್ ನಾ., ಜಾಗತೀಕರಣ ಮತ್ತು ದಲಿತರು, ಲಡಾಯಿ ಪ್ರಕಾಶನ, ಗದಗ, 2013.
2. ದೇವರಾಜು ಟಿ. ಎಸ್., ಕರ್ನಾಟಕ ಕೃಷಿ, ಕೃಷಿ ಆಯವ್ಯಯ ಮತ್ತು ಜಾಗತಿಕ ಕೃಷಿ ಹೂಡಿಕೆ ಮೇಳ ವಿಶ್ಲೇಷಣೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 2014.
3. ನಾಗರಾಜ್‌ಕೆ., ಭಾರತದ ರೈತರ ಆತ್ಮಹತ್ಯೆಗಳು: ಸ್ವರೂಪ, ದಿಕ್ಕು-ದೆಸೆ ಮತ್ತು ದೇಶೀಯ ಮಾದರಿಗಳು, ಮದ್ರಾಸ್ ಅಭಿವೃದ್ಧಿ ಅಧ್ಯಯನ ಕೇಂದ್ರ (ಎಂ.ಐ.ಡಿ.ಎಸ್), 2008.
4. ನಾಗೇಶ್ ಹೆಚ್. ವಿ., ಗ್ರಾಮಾಂತರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2000.
5. ನಾಯ್ಡು ಜಿ. ವಿ. ಬಿ.,ವ್ಯವಸಾಯಕೈಪಿಡಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1972.
6. ನಾಯ್ಡುಜಿ. ವಿ. ಬಿ., ವ್ಯವಸಾಯ ಪ್ರಗತಿ ಸಾಧನೆಯ ಸೂತ್ರಗಳು, ಮೈಸೂರು ವಿಶ್ವ ವಿದ್ಯಾಲಯ, ಪ್ರಸರಾಂಗ, 1978.
7. ಪ್ರದೀಪ್ ಬೆಳಗಲ್, ಪೂರ್ವೇತಿಹಾಸ, ಕ್ರಿಯಾ ಪ್ರಕಾಶನ, ಬೆಂಗಳೂರು, 2008.
8. ಪುಟ್ಟಸ್ವಾಮಿ ಕೆ., ಕೃಪಾಕರ ಸೇನಾನಿ, ಜೀವಜಾಲ, ಅಭಿನವ ಪ್ರಕಾಶನ, ಬೆಂಗಳೂರು, 2011.
9. ಬದಾಮಿ ಎಂ.ಎಸ್., ಜಾಗತೀಕರಣ ಮತ್ತು ಶಿಕ್ಷಣ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 2006.
10. ಬಾಲಕೃಷ್ಣ ಜೆ., ಕೃಷಿ ವಿಜ್ಞಾನ ಸಾಹಿತ್ಯ ನಡೆದು ಬಂದ ಹಾದಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.
11. ಬೆಲ್‌ಡೆವಿಡ್., ಬೆಳೆಯುತ್ತಿರುವ ಸಮಸ್ಯೆಗಳು, ಅಕ್ಷರ ಪ್ರಕಾಶನ, ಸಾಗರ.
12. ಮಲ್ಲಿಕಾರ್ಜುನ ಹೊಸಪಾಳ್ಯ, ಕೃಷಿ ಆಚರಣೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2008.
13. ಮುರಾರಿ ನಾಯ್ಕ ಡಿ., ರೈತ ಹೋರಾಟಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 2006.



**Creative Commons (CC) License**

This article is an open access article distributed under the terms and conditions of the Creative Commons Attribution (CC BY 4.0) license. This license permits unrestricted use, distribution, and reproduction in any medium, provided the original author and source are credited.